# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ**
**ಜಿಕೆವಿಕೆ, ಬೆಂಗಳೂರು-560 065.**

ಸಂಖ್ಯೆ ಹನಿಅ:ವಿಭಾಗ-1: ಸಿಬ್ಬಂದಿ: 2009-10 ದಿನಾಂಕ 14-11-2009

**ಸುತ್ತೋಲೆ ಸಂಖ್ಯೆ - 26**

ವಿಷಯ : ಆಡಳಿತ ಮಂಡಳಿಯ ಸದಸ್ಯರಿಗೆ ಹಾಗೂ Selection committee ಸದಸ್ಯರಿಗೆ ಪ್ರವಾಸ ಭತ್ಯೆ ಮತ್ತು ಇತರೆ ಭತ್ಯೆಯ ಬಿಲ್ಲುಗಳನ್ನು ತಯಾರಿಸುವುದು ಹಾಗೂ ಪಾವತಿ ಮಾಡುವ ಕೆಲಸಗಳನ್ನು ಇನ್ನು ಮುಂದೆ ಸಂಬಂಧಪಟ್ಟ ಕಛೇರಿಗಳಲ್ಲಿ ನಿರ್ವಹಿಸುವ ಬಗ್ಗೆ.

ಉಲ್ಲೇಖ :
1. ದಿನಾಂಕ 12-11-2009 ರಂದು ನಡೆದ ಕೃವಿವಿ ಅಧಿಕಾರಿಗಳ ಸಭೆ ( Staff meeting )
2. ಉಪಕುಲಪತಿಗಳ ಅನುಮೋದನೆ ದಿನಾಂಕ 13-11-2009

ದಿನಾಂಕ 12-11-2009 ರಂದು ನಡೆದ ಕೃವಿವಿ ಅಧಿಕಾರಿಗಳ ಸಭೆ ( Staff meeting ) ಯಲ್ಲಿ ತೀರ್ಮಾನಿಸಿದಂತೆ ಅಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಇತರೆ ಸಮಿತಿಯ ಸಭೆಗಳಿಗೆ ಅಗಮಿಸುವ ಅಧಿಕಾರಿಗಳಿಗೆ ಪ್ರಮಾಸ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿ ಮಾಡುವುದನ್ನು ಈ ಕೆಳಕಂಡ ಕಛೇರಿಗಳಿಗೆ ಮರು ಹಂಚಿಕೆ ಮಾಡಲಾಗಿದೆ.

1. ಕೃವಿವಿಯ ಆಡಳಿತ ಮಂಡಳಿಯ ಮತ್ತು ಆಡಳಿತ ಮಂಡಳಿಯ ಸಮಿತಿಗಳ ಸಭೆಗಳಲ್ಲಿ ಭಾಗವಹಿಸುವ ಸದಸ್ಯರಿಗೆ ಪ್ರವಾಸ ಭತ್ಯೆ ಹಾಗೂ ಇತರೆ ಭತ್ಯಗಳನ್ನು ಇನ್ನು ಮುಂದು ಕುಲಸಚಿವರ ಕಛೇರಿಯಿಂದಲೇ ಪಾವತಿ ಮಾಡುವುದು.

2. Farm Development Committee ಬಗ್ಗೆ ನಡೆಯುವ ಕೃವಿವಿ ಆಡಳಿತ ಮಂಡಳಿಯ ಸಮಿತಿಯ ಸಭೆಗಳಲ್ಲಿ ಭಾಗವಹಿಸುವ ಸದಸ್ಯರಿಗೆ ಪ್ರವಾಸ ಭತ್ಯೆಯನ್ನು ಮತ್ತು ಇತರೆ ಭತ್ಯೆಗಳನ್ನು ಆಡಳಿತ ಮಂಡಳಿಯ ಸದಸ್ಯರಿಗೆ ಸಂಶೋಧನಾ ನಿರ್ಧೇಶಕರ ಕಛೇರಿಯಿಂದ ಪಾವತಿ ಮಾಡುವುದು.

3. ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರಗಳಲ್ಲಿ ಹಾಗೂ ಜಿಕೆವಿಕೆಯಲ್ಲಿ ನಡೆಯುವ ಕೃಷಿ ಮೇಳದಲ್ಲಿ ಅತಿಥಿಗಳಾಗಿ ಭಾಗವಹಿಸುವ ಆಡಳಿತ ಮಂಡಳಿ ಸದಸ್ಯರುಗಳಿಗೆ ಪ್ರವಾಸ ಭತ್ಯೆ ( TA/DA ) ಯನ್ನು ಸಂಶೋಧನಾ ನಿರ್ದೇಶಕರ ಕಛೇರಿಯಿಂದಲೇ ಪಾವತಿಸುವುದು.

4. Extension & Publicity committe ಬಗ್ಗೆ ನಡೆಯುವ ಕೃವಿವಿ ಆಡಳಿತ ಮಂಡಳಿಯ ಸಮಿತಿಯ ಸಭೆಗಳಲ್ಲಿ ಭಾಗವಹಿಸುವ ಸದಸ್ಯರುಗಳಿಗೆ ಪ್ರವಾಸ ಭತ್ಯೆಯನ್ನು ಮತ್ತು ಇತರೆ ಭತ್ಯೆಗಳನ್ನು ಆಡಳಿತ ಮಂಡಳಿಯ ಸದಸ್ಯರಿಗೆ ವಿಸ್ತರಣಾ ನಿರ್ಧೇಶಕರ ಕಛೇರಿಯಿಂದ ಪಾವತಿ ಮಾಡುವುದು.

5. Works Committee ಬಗ್ಗೆ ನಡೆಯುವ ಕೃವಿವಿ ಆಡಳಿತ ಮಂಡಳಿಯ ಸಮಿತಿಯ ಸಭೆಗಳಲ್ಲಿ ಭಾಗವಹಿಸುವ ಸದಸ್ಯರಿಗೆ ಪ್ರವಾಸ ಭತ್ಯೆಯನ್ನು ಮತ್ತು ಇತರೆ ಭತ್ಯೆಗಳನ್ನು ಆಡಳಿತ ಮಂಡಳಿಯ ಸದಸ್ಯರಿಗೆ ಆಸ್ತಿ ಅಧಿಕಾರಿಗಳ ಕಛೇರಿಯಿಂದ ಪಾವತಿ ಮಾಡುವುದು.

6. Grievance Committee ಬಗ್ಗೆ ನಡೆಯುವ ಕೃವಿವಿ ಆಡಳಿತ ಮಂಡಳಿಯ ಸಮಿತಿಯ ಸಭೆಗಳಲ್ಲಿ ಭಾಗವಹಿಸುವ ಸದಸ್ಯರುಗಳಿಗೆ ಪ್ರವಾಸ ಭತ್ಯೆಯನ್ನು ಮತ್ತು ಇತರೆ ಭತ್ಯೆಗಳನ್ನು ಹಾಗೂ Selection committee / ನೇಮಕಾತಿ ಸಮಿತಿಯ ಸಭೆಗಳಿಗೆ ಹಾಜರಾಗುವ ಅಧಿಕಾರಿಗಳಿಗೆ / ಅಡಳಿತ ಮಂಡಳಿ ಸದಸ್ಯರಿಗೆ ಆಡಳಿತಾಧಿಕಾರಿಗಳ ಕಛೇರಿಯಿಂದ ಪಾವತಿ ಮಾಡುವುದು.

7. ವಿದ್ಯಾರ್ಥಿನಿಲಯಗಳ ಹಾಗೂ ಕ್ರೀಡಾ ಕಾರ್ಯಕ್ರಮಗಳಲ್ಲಿ ಅತಿಥಿಗಳಾಗಿ ಭಾಗವಹಿಸುವ ಅಡಳಿತ ಮಂಡಳಿ ಸದಸ್ಯರುಗಳಿಗೆ ಪ್ರವಾಸ ಭತ್ಯೆಯನ್ನು ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರ ಕಛೇರಿಯಿಂದ ಪಾವತಿಸುವುದು.

8. ಕೃಷಿ ವಿಶ್ವವಿದ್ಯಾನಿಲಯದ ಮಹಾವಿದ್ಯಾಲಯಗಳ ಕಾರ್ಯಕ್ರಮಗಳಲ್ಲಿ ಅತಿಥಿಗಳಾಗಿ ಭಾಗವಹಿಸುವ ಅಡಳಿತ ಮಂಡಳಿ ಸದಸ್ಯರುಗಳಿಗೆ ಪ್ರವಾಸ ಭತ್ಯೆಯನ್ನು ಸಂಬಂಧಪಟ್ಟ ಮಹಾವಿದ್ಯಾಲಯದ ಕಛೇರಿಯಿಂದ ಪಾವತಿಸುವುದು.

ಹಣಕಾಸು ನಿಯಂತ್ರಣಾಧಿಕಾರಿಗಳು.

ಪ್ರತಿ :

1. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಮಹಾವಿದ್ಯಾಲಯಗಳ ಡೀನ್ ರವರಿಗೆ
3. ಕೃವಿವಿಯ ಎಲ್ಲಾ ಸಹ ಸಂಶೋಧನಾ ನಿರ್ದೇಶಕರಿಗೆ
4. ಕೃವಿವಿಯ ಎಲ್ಲಾ ಹಿರಿಯ ಕ್ಷೇತ್ರಾಧೀಕ್ಷಕರು / ಕ್ಷೇತ್ರಾಧೀಕ್ಷಕರಿಗೆ
5. ಕೃವಿವಿಯ ಎಲ್ಲಾ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು / ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳಿಗೆ